**ದಿನಾಂಕಃ 01-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ NKK ವಕೀಲರಿಂದಃ**

6. ಆರೋಪಿತರು ನನ್ನ ಅಂಗಡಿಯಿಂದ ಕೃಷಿ ಸಲಕರಣೆಗಳನ್ನು ಅಂದರೆ ಕೋಕೋ ಪಿಟ್ , ಮೆಶ್, ಪ್ಲಾಸ್ಟಿಕ್ ಮಲ್ಚ ಮತ್ತು ಡ್ರಿಪ್ ತೆಗೆದುಕೊಂಡು ಹೋಗಿದ್ದಾರೆ. ಆರೋಪಿತರು 10 ರಿಂದ 12 ಬಾರಿ ನನ್ನ ಅಂಗಡಿಗೆ ಬಂದಿರಬಹುದು. ಆರೋಪಿತರು ಕೊನೆಯ ಬಾರಿ ನಮ್ಮ ಅಂಗಡಿಗೆ ದಿಃ 03-07-2018 ರಂದು ಬಂದಿದ್ದರು. ಆ ನಂತರ ಚೆಕ್ ನೀಡಲು ಬಂದಿದ್ದರು. ದಿಃ 03-07-2018 ಕ್ಕಿಂತ ಮುಂಚೆ ಗೂಡ್ಸ ಡಿಲೆವರಿ ಕುರಿತು ಆರೋಪಿತರ ಸಹಿ ಪಡೆದಿದ್ದೇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ನಿಪಿ-15 ರಲ್ಲಿ 5 ನೇ ಆರೋಪಿತನ ಸಹಿ ಇದೆ.

7. ಚೆಕ್ ನ್ನು ಹೆಚ್ ಎಂ ಬಡಿಗೇರ ಹಾಗೂ ವಿಜಯಕುಮಾರ ಬೀರಾದರ್ ಸೇರಿಯೇ ನೀಡಿದ್ದಾರೆ. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ನಿಪಿ-15 ರಲ್ಲಿಯ ಸಹಿಗೂ ಹಾಗೂ ಚೆಕ್ ಮೇಲಿರುವ ಸಹಿಗೂ ಹೊಂದಾಣಿಕೆಯಾಗುವುದಿಲ್ಲ ಏಕೆಂದರೆ ಚೆಕ್ ಮೇಲೆ ಹೆಚ್ ಎಂ ಬಡಿಗೇರ ರವರು ಸಹಿ ಮಾಡಿದ್ದಾರೆ. ಈಗ ನಾನು ನಿಪಿ-15 ರ ದಾಖಲೆಯನ್ನು ನೋಡುತ್ತಿದ್ದು, ಅದರಲ್ಲಿರುವ ಸಹಿಯನ್ನು ಗುರುತಿಸುತ್ತೇನೆ. ಸಾಕ್ಷಿಯು ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿಪಿ-15 ಎ ಎಂದು ಗುರುತಿಸಲಾಯಿತು. ನಿಪಿ-15 ನ್ನು ಬಿಟ್ಟು ಬೇರೆ ಬಿಲ್ ಗಳಿಗೆ ಸಹಿಗಳು ಇಲ್ಲ ಎನ್ನುವುದು ಸರಿಯಲ್ಲ. ಯಾವುದೇ ಬಿಲ್ ಗಳಿಗೆ ಹೆಚ್ ಎಂ ಬಡಿಗೇರ ರವರ ಸಹಿ ಇಲ್ಲ ಎಂದರೆ ನಿಜ. ಚೆಕ್ ಮೇಲಿನ ಸಹಿಯನ್ನು ಹೊರತು ಪಡಿಸಿ, ಹೆಚ್ ಎಂ ಬಡಿಗೇರರವರ ಬೇರೆ ಸಹಿಯನ್ನು ನಾನು ನೋಡಿಲ್ಲ.

8. ಹೆಚ್ ಎಂ ಬಡಿಗೇರರವರು ದಿಃ 06-09-2018 ರಂದು ಕೊನೆಯ ಬಾರಿ ನನ್ನ ಅಂಗಡಿಗೆ ಬಂದಿದ್ದರು. ನಾನು ಚೆಕ್ ನ್ನು ಅದೇದಿನ ನಗದೀಕರಣಕ್ಕೆ ಸಲ್ಲಿಸಿದ್ದೆ. ನಾನು ಒಂದು ಚೆಕ್ ನ್ನು 20-09-2018 ರಂದು ಹಾಗೂ ಇನ್ನೊಂದು ಚೆಕ್ ನ್ನು 11-10-2018 ರಂದು ನಗದೀಕರಣಕ್ಕೆ ಸಲ್ಲಿಸಿದ್ದೆ. ಸದರಿ ಚೆಕ್ ಗಳು ಒಂದು ತಿಂಗಳು 4 ದಿನಗಳವರೆಗೆ ನನ್ನ ಬಳಿ ಇದ್ದವು. ಎರಡೂ ಚೆಕ್ ಗಳಲ್ಲಿರುವ ಕೈ ಬರಹ ಒಬ್ಬ ವ್ಯಕ್ತಿಯದೇ ಎಂದರೆ ನಿಜ. ಸದರಿ ಬರಹಗಳನ್ನು ನಾನೇ ಬರೆದಿದ್ದೇನೆ ಎಂದರೆ ಸರಿಯಲ್ಲ. ಚೆಕ್ ಗಳಲ್ಲಿ ಇರುವ ಬರಹಗಳನ್ನು ಬೇರೆ ಬೇರೆ ಪೆನ್ ನಿಂದ ಬರೆಯಲಾಗಿದೆ ಎಂದರೆ ನಿಜ. ಚೆಕ್ ನಲ್ಲಿರುವ ಸಹಿ ಯಾರದ್ದು ಎನ್ನುವುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅದು ಹೆಚ್ ಎಂ ಬಡಿಗೇರರವರದು ಎಂದು ನುಡಿಯುತ್ತಾರೆ. ನಿಪಿ-4 ಮತ್ತು 7 ರಲ್ಲಿರುವ ಅಂಚೆ ಸ್ವೀಕೃತಿ ಪತ್ರ ಗಳಲ್ಲಿ ಯಾರ ಸಹಿಗಳೂ ಇಲ್ಲ ಎಂದರೆ ನಿಜ. ಆದ್ದರಿಂದ ನೋಟಿಸುಗಳು ಆರೋಪಿತರಿಗೆ ಜಾರಿಯಾಗಿಲ್ಲ ಎಂದರೆ ನಿಜ. ನೀವು ಆರೋಪಿತರಿಗೆ 2 ನೇ ಬಾರಿ ನೋಟಿಸು ನೀಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

9. ನಾನು ಆರೋಪಿತರಿಗೆ ನೇರವಾಗಿ ಯಾವುದೇ ವಸ್ತುಗಳನ್ನು ನೀಡಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ಯಾವುದೇ ವಸ್ತುಗಳ ಕುರಿತು ಹಾಗೂ ಹಣದ ಕುರಿತು ಚೆಕ್ ನೀಡಿಲ್ಲ ಎಂದರೆ ನಿಜ. ಆರೋಪಿತರ ಖಾಲಿ ಚೆಕ್ ಗಳನ್ನು ನಾನೇ ಬರೆದುಕೊಂಡು ದುರುಪಯೋಗ ಪಡಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನೀವು ಹಾಜರು ಪಡಿಸಿರುವ ಬಿಲ್ ಗಳ ಕುರಿತು ವ್ಯವಹಾರ ಪೂರ್ಣ ಗೊಂಡಿದೆ ಎಂದರೆ ಸಾಕ್ಷಿಯು ವಸ್ತುಗಳನ್ನು ಕಳುಹಿಸಿದ್ದೇವೆ ಆದರೆ ಹಣ ಪಾವತಿಯಾಗಿಲ್ಲ ಎಂದು ನುಡಿಯುತ್ತಾರೆ. ನಾವು ಉದ್ರಿ ವ್ಯವಹಾರ ಮಾಡುವುದಿಲ್ಲ

ಎನ್ನುವುದು ಸರಿಯಲ್ಲ. ನಾನು ಸುಳ್ಳು ಬಿಲ್ ಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತನಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರು ದಾಖಲಿಸಿ, ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.